ಆಡಳಿತ ಭಾಷೆಕನ್ನಡ, ಕನ್ನಡದಲ್ಲೇ ವ್ಯವಹರಿಸಿ

ಕರ್ನಾಟಕ ಸರ್ಕಾರ

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.**

ಸಂಖ್ಯೆ: ವಿ1/ವಿ.ಸ.ಪ/ಪ.ಕಾ/4/2015 ದಿನಾಂಕ: 16.09.2015

**ಸುತ್ತೋಲೆ**

**ವಿಷಯ:**2015 ರಅಕ್ಟೋಬರ್/ನವೆಂಬರ್‌ನಲ್ಲಿ ನಡೆಯಲಿರುವ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಜೂನಿಯರ್, ಸೀನಿಯರ್, ವಿದ್ವತ್ ಪೂರ್ವ ಮತ್ತು ವಿದ್ವತ್‌ಅಂತಿಮ ಪರೀಕ್ಷೆಗಳ ನಿರ್ವಹಣೆಕುರಿತು.

----

**ಪರೀಕ್ಷಾ ಪೂರ್ವ ಚಟುವಟಿಕೆಗಳು:**

1. 2015ನೇ ಸಾಲಿನ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಜೂನಿಯರ್, ಸೀನಿಯರ್, ವಿದ್ವತ್ ಪೂರ್ವ ಹಾಗೂ ವಿದ್ವತ್‌ಅಂತಿಮ ಪರೀಕ್ಷೆಗಳು ಅಕ್ಟೋಬರ್ ಹಾಗೂ ನವೆಂಬರ್ ಮಾಹೆಗಳಲ್ಲಿ ನಡೆಯಲಿದ್ದು, ವೇಳಾ ಪಟ್ಟಿಯನ್ನು ಪ್ರಕಟಿಸಲಾಗಿದೆ. ಸದರಿ ವೇಳಾಪಟ್ಟಿಯಂತೆ ಶಾಸ್ತ್ರ(ಥಿಯರಿ) ಹಾಗೂ ಪ್ರಾಯೋಗಿಕ ಪರೀಕ್ಷೆಗಳನ್ನು ಹಮ್ಮಿಕೊಳ್ಳುವುದು. (ವೇಳಾಪಟ್ಟಿ ಲಗತ್ತಿಸಿದೆ)
2. ನಿಮ್ಮಕೇಂದ್ರಕ್ಕೆ ನಿಗದಿಪಡಿಸಿರುವ ಪರೀಕ್ಷಾರ್ಥಿಗಳ ನಾಮಿನಲ್‌ರೋಲ್ ಹಾಗೂ ಪ್ರವೇಶ ಪತ್ರಗಳನ್ನು ಈಗಾಗಲೇ ಕಳುಹಿಸಲಾಗಿದೆ. ಪ್ರವೇಶ ಪತ್ರಗಳನ್ನು ಸಂಬಂಧಿಸಿದ ಪರೀಕ್ಷಾರ್ಥಿಗಳಿಗೆ ವಿತರಿಸುವುದು. ವಿತರಿಸುವ ಸಂದರ್ಭದಲ್ಲಿ ವಿದ್ಯಾರ್ಥಿಯ ವಿವರಅಥವಾ ವಿಷಯಗಳಲ್ಲಿ ವ್ಯತ್ಯಾಸ/ನ್ಯೂನತೆಕಂಡುಬಂದಲ್ಲಿ ಸಂಬಂಧಿಸಿದ ಪ್ರವೇಶ ಪತ್ರದಜೆರಾಕ್ಸ್ ಪ್ರತಿಯಲ್ಲಿತಿದ್ದುಪಡಿಯಾಗಬೇಕಾದ ಮಾಹಿತಿ ನಮೂದಿಸಿ ಪೂರಕ ದಾಖಲೆಗಳೊಂದಿಗೆ ಆ ದಿನವೇ ಮಂಡಳಿಗೆ ಸಲ್ಲಿಸುವುದು. ಮೂಲ ಪ್ರವೇಶ ಪತ್ರವನ್ನು ಮಂಡಳಿಗೆ ಕಳುಹಿಸಬಾರದು.
3. ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಕೊಠಡಿಗಳು, ಪೀಠೋಪಕರಣಗಳು, ಇತರೆ ಸೌಲಭ್ಯಗಳ ವ್ಯವಸ್ಥೆ ಮಾಡಿಕೊಳ್ಳುವುದು.
4. ಶಾಸ್ತ್ರ ಪತ್ರಿಕೆಗಳಿಗೆ ಕೊಠಡಿ ಮೇಲ್ವಿಚಾರಕರಾಗಿ (ಸಂಗೀತ ಶಿಕ್ಷಕರನ್ನು ಹೊರತು ಪಡಿಸಿ) ಇತರೆ ಶಿಕ್ಷಕರನ್ನು ನೇಮಕ ಮಾಡಿ, ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮೋದನೆ ಪಡೆಯುವುದು.ಜೂನಿಯರ್ ವಿಭಾಗದಲ್ಲಿ ಶಾಸ್ತ್ರ ಪತ್ರಿಕೆಯ ದಿನವೇ ಶ್ರವಣಜ್ಞಾನ/ದೃಶ್ಯಜ್ಞಾನ ಪರೀಕ್ಷೆಯೂಇರುವುದರಿಂದ, ಈ ಪರೀಕ್ಷೆಗೆ ಸಂಗೀತ ಶಿಕ್ಷಕರನ್ನು ಮಾತ್ರಕೊಠಡಿ ಮೇಲ್ವಿಚಾರಕರಾಗಿ ನೇಮಕ ಮಾಡಿಕೊಳ್ಳುವುದು. ಪ್ರಾಯೋಗಿಕ ಪರೀಕ್ಷೆಗೆ ನಿಮ್ಮ ಸಂಸ್ಥೆಗೆ ನಿಯೋಜಿಸಿರುವ ಸಂಗೀತ ಶಿಕ್ಷಕರುಗಳಲ್ಲಿ ಅಗತ್ಯವಿರುವಷ್ಟು ಶಿಕ್ಷಕರನ್ನು ಕೊಠಡಿ ಮೇಲ್ವಿಚಾರಕರನ್ನಾಗಿ ನೇಮಕ ಮಾಡುವುದು.
5. ಮಂಡಳಿಯು ನಿಮ್ಮ ಪರೀಕ್ಷಾಕೇಂದ್ರಕ್ಕೆ ನಿಗದಿಪಡಿಸಿರುವ ವಿಷಯವಾರು ಅಭ್ಯರ್ಥಿಗಳ ಪಟ್ಟಿಯನ್ನುಲಗತ್ತಿಸಿದೆ. ಇದರಆಧಾರದ ಮೇಲೆ ಅಭ್ಯರ್ಥಿಗಳ ತಂಡಗಳ ವೇಳಾಪಟ್ಟಿ ಸಿದ್ಧಪಡಿಸಿ ದಿನಾಂಕ:25.09.2015ರೊಳಗೆ ಪ್ರಕಟಿಸಿ, ಒಂದು ಪ್ರತಿಯನ್ನು ಮಂಡಳಿಗೆ ಕಳುಹಿಸುವುದು.
6. ನಿಯೋಜಿತ ಪರೀಕ್ಷಕರುಗಳ ಪಟ್ಟಿಯಲ್ಲಿಅವರ ವಿಳಾಸ ಹಾಗೂ ದೂರವಾಣಿ ಸಂಖ್ಯೆಇರುತ್ತದೆ. ನೇಮಕಾತಿಆಗಿರುವುದರ ಬಗ್ಗೆ ಅವರಿಗೆ ಮಾಹಿತಿ ಕಳುಹಿಸಿ, ಪರೀಕ್ಷಾಕಾರ್ಯ ಪ್ರಾರಂಭವಾಗುವ ಮುನ್ನ ಸಭೆಗೆ ಹಾಜರಾಗುವಂತೆ ತಿಳಿಸಿ, ಸಭೆಯಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.
7. ಸೆಪ್ಟೆಂಬರ್ ಮಾಹೆಯಕೊನೆಯ ವಾರದಲ್ಲಿ ನಿಮಗೆ ಸಂಬಂಧಿಸಿದ ಡಯಟಗಳಿಗೆ ಪರೀಕ್ಷಾ ಸಾಮಗ್ರಿಗಳನ್ನು ಕಳುಹಿಸಲಾಗುತ್ತದೆ. ನೀವು ಅಂದುಡಯಟ್‌ನಲ್ಲಿ ಹಾಜರಿದ್ದು, ಮಂಡಳಿಯಿಂದ ಕಳುಹಿಸಿರುವ

ಪರೀಕ್ಷಾಸಾಮಗ್ರಿಗಳು(ಲೇಖನ ಹಾಗೂ ಗೌಪ್ಯ) ಅಗತ್ಯತೆಗೆ ಸಾಕಷ್ಟಿರುವುದನ್ನು ಖಚಿತಪಡಿಸಿಕೊಳ್ಳುವುದು. ಕೊರತೆಯಾಗಿರುವುದುಕಂಡು ಬಂದಲ್ಲಿಕೂಡಲೇಡಯಟ್ ಪ್ರಾಂಶುಪಾಲರಿಗೆಹಾಗೂ ಮಂಡಳಿಗೆ ಲಿಖಿತವಾಗಿ ತಿಳಿಸುವುದು.

8. **<u>ಪ್ರಶ್ನೆ ಪತ್ರಿಕೆಗಳು</u>** :ನಿಮ್ಮ ಪರೀಕ್ಷಾಕೇಂದ್ರದ ಪ್ರಶ್ನೆ ಪತ್ರಿಕೆಗಳನ್ನು ಸಂಬಂಧಿಸಿದ ಡಯಟ್‌ಗಳಿಗೆ ಕಳುಹಿಸಲಾಗುತ್ತದೆ. ನೀವು ಡಯಟ್ ಪ್ರಾಂಶುಪಾಲರ ಮುಖಾಂತರ ಪ್ರಶ್ನೆ ಪತ್ರಿಕೆಗಳನ್ನು ಪಡೆದು ನಿಮ್ಮ ಪರೀಕ್ಷಾಕೇಂದ್ರಕ್ಕೆ ಸಂಬಂಧಿಸಿದ ಪ್ರಶ್ನೆ ಪತ್ರಿಕೆಗಳು ಕೇಂದ್ರಕ್ಕೆ ನಿಗಧಿಯಾಗಿರುವ ಪರೀಕ್ಷಾರ್ಥಿಗಳಿಗೆ ಅಗತ್ಯವಿರುವ ಸಂಖ್ಯೆಯಲ್ಲಿ ಪ್ರಶ್ನೆ ಪತ್ರಿಕೆಗಳು ಇರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು. ಏನಾದರೂ ವ್ಯತ್ಯಾಸವಿದ್ದಲ್ಲಿಡಯಟ್ ಪ್ರಾಂಶುಪಾಲರ ಮುಖಾಂತರ ನಿರ್ದೇಶಕರು(ಇತರೆ ಪರೀಕ್ಷೆಗಳ)ರವರ ಗಮನಕ್ಕೆ ತರುವುದು.

**<u>ಪರೀಕ್ಷಾ ಸಮಯದ ಚಟುವಟಿಕೆಗಳು:</u>**

9. ಪ್ರಾಯೋಗಿಕ ಪರೀಕ್ಷೆಗೆ ಸಂಬಂಧಿಸಿದಂತೆ ಮಂಡಳಿಯಿಂದ ನೇಮಕ ಮಾಡಿ ಕಳುಹಿಸಿರುವ ಪರೀಕ್ಷಕರುಗಳನ್ನು ಈಗಾಗಲೇ ಪರೀಕ್ಷಾರ್ಥಿಗಳನ್ನು ಮಂಡಳಿವಾರು ಹಂಚಿಕೆ ಮಾಡಿ ಪ್ರಕಟಿಸಿರುವಂತೆ ಆಯಾ ದಿನದ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲುಕ್ರಮವಹಿಸುವುದು.
10. ಪರೀಕ್ಷಾಕೇಂದ್ರದಲ್ಲಿ ನಿಗದಿಪಡಿಸಿರುವ ವಿಷಯಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಸಂಖ್ಯೆಗೆಅನುಗುಣವಾಗಿ ಪ್ರಾಯೋಗಿಕ ಪರೀಕ್ಷೆಯ ಎ.ಎಂ.ಎಲ್.ಶೀಟ್‌ಗಳನ್ನು ಕಳುಹಿಸಲಾಗುತ್ತದೆ. ಮುಖ್ಯಅಧೀಕ್ಷಕರುಕ್ಯೂ.ಪಿ.ಆರ್.ಪ್ರಕಾರಎಲ್ಲಾ ವಿಷಯಗಳ ಎ.ಎಂ.ಎಲ್.ಗಳು ಕ್ರಮವಾಗಿವೆಯೇಎಂದು ಪರೀಕ್ಷೆಗೆ ಮೊದಲೇ ಪರಿಶೀಲಿಸಿಕೊಂಡು ಏನಾದರೂ ಸಮಸ್ಯೆಇದ್ದಲ್ಲಿಕೂಡಲೇ ಶಾಖಾಧಿಕಾರಿಗಳಿಗೆ ಫ್ಯಾಕ್ಸ್, ಪೋನ್‌ಅಥವಾ ಪತ್ರದ ಮೂಲಕ ತಿಳಿಸಿ ಬಾಕಿ ಎ.ಎಂ.ಎಲ್. ಪಡೆಯುವುದು.
11. ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತ ಪರೀಕ್ಷೆಗಳಲ್ಲಿ ಒಂದೇಅಭ್ಯರ್ಥಿ ಹಾಡುಗಾರಿಕೆ ಮತ್ತು ವಾದ್ಯ ಸಂಗೀತಎರಡು ವಿಷಯಗಳಿಗೆ  ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶವಿದೆ. ಅಂತಹ ಅಭ್ಯರ್ಥಿಗಳಿಗೆ ಎರಡು ವಿಷಯಗಳಿಗೆ ಪ್ರತ್ಯೇಕವಾಗಿ ನೋಂದಣಿಸಂಖ್ಯೆಯನ್ನು ನೀಡಲಾಗುತ್ತದೆ. ಈ ರೀತಿಎರಡು ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳ ಪಟ್ಟಿಯನ್ನುಕೊಠಡಿ ಮೇಲ್ವಿಚಾರಕರಿಂದ ಪಡೆದು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ*ಕ್ರೋಢೀಕರಿಸಿ* ಒಂದು ಪ್ರತ್ಯೇಕವಾದಕವರಿನಲ್ಲಿ ಹಾಕಿ ವಿವರ ಬರೆದು ಮಂಡಳಿಗೆ ಸಲ್ಲಿಸುವುದು.
12. ಪ್ರಾಯೋಗಿಕ ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಗಳ ಪೋಷಕರಾಗಲೀ, ಗುರುಗಳಾಗಲೀ, ಸಂಬಂಧಿಕರಾಗಲೀ ಪರೀಕ್ಷೆ ನಡೆಯುವ ಸ್ಥಳಕ್ಕೆ ಪ್ರವೇಶಿಸುವುದನ್ನು ನಿಷೇಧಿಸಿದೆ.
13. ಪ್ರಾಯೋಗಿಕ ಪರೀಕ್ಷಕರುಅಭ್ಯರ್ಥಿಗೆ ಅಂಕ ನೀಡುವಾಗಒಬ್ಬ ಪರೀಕ್ಷಕರು ನೀಡುವ ಅಂಕಗಳಿಗೂ ಅದೇ ಬೋರ್ಡ್‌ನಲ್ಲಿರುವಇನ್ನೊಬ್ಬ ಪರೀಕ್ಷಕರು ನೀಡುವ ಅಂಕಗಳಿಗೂ ವ್ಯತ್ಯಾಸಶೇಕಡಾ10 ಅಂಕಗಳಿಗೆ ಮೀರಬಾರದು.
14. **<u>ವಿದ್ವತ್‌ಅಂತಿಮ ಪ್ರಾಯೋಗಿಕ ಪತ್ರಿಕೆ–2ರಲ್ಲಿ  ಭಾಗ–1 ಮಂಚ ಪ್ರದರ್ಶನ 100 ಅಂಕಗಳ ಪತ್ರಿಕೆಯಾಗಿದ್ದು, ಆಮಂತ್ರಿತಕಲಾವಿದರ/ಸಾರ್ವಜನಿಕರ/ಪೋಷಕರಎದುರಿಗೆ ಪ್ರತಿ ವಿದ್ಯಾರ್ಥಿಯಿಂದಒಂದುಘಂಟೆಕಛೇರಿ ನಡೆಸುವುದರ ಮೂಲಕ ಪ್ರಾಯೋಗಿಕ ಪರೀಕ್ಷೆ ನಡೆಸುವುದು. ಪ್ರಾಯೋಗಿಕ ಪರೀಕ್ಷೆ ಪ್ರಾರಂಭವಾಗುವ ಹಿಂದಿನ ದಿನವೇ ವ್ಯವಸ್ಥೆ ಮಾಡಿಕೊಂಡು ವಿದ್ವತ್‌ಅಂತಿಮ ಪರೀಕ್ಷೆ ತೆಗದುಕೊಳ್ಳುವ ವಿದ್ಯಾರ್ಥಿಗಳಿಗೆ ಪ್ರದರ್ಶನ ನೀಡಲು ಅನುಕೂಲ ಮಾಡಿಕೊಡಲು ತಿಳಿಸಿದೆ. ಹಾಗೂ ಡಿ.ಎಸ್.ಇ.ಆರ್.ಟಿ.ಯ ಸಂಗೀತ/ನೃತ್ಯ/ತಾಳವಾದ್ಯ ಪರೀಕ್ಷೆಗಳ ಪಠ್ಯಕ್ರಮದಲ್ಲಿರಂಗಮಂಚ ಪ್ರದರ್ಶನ ಬಗ್ಗೆ ನೀಡಿರುವ ಮಾಹಿತಿಯನ್ನು ಈ ಸುತ್ತೋಲೆಯೊಂದಿಗೆ ಕಳುಹಿಸಲಾಗಿದೆ.</u>** ಈ ಬಗ್ಗೆ ವಿದ್ವತ್ ಪರೀಕ್ಷೆಯ ಪ್ರಾಯೋಗಿಕ ಪರೀಕ್ಷಕರು/ಅಧ್ಯಕ್ಷರ ಗಮನಕ್ಕೆ ತಂದು ಪಠ್ಯಕ್ರಮದಲ್ಲಿ ವಿವರಿಸಿರುವಂತೆ ಕ್ರಮ ಕೈಗೊಳ್ಳಲುತಿಳಿಸುವುದು. ಮಂಚಪ್ರದರ್ಶನಕಾರ್ಯಕ್ರಮದ ವೀಡಿಯೋಗ್ರಾಫ್‌ತೆಗೆದುCDಯನ್ನು ಮಂಡಳಿಗೆ ಕಳುಹಿಸುವುದು.
15. **<u>Centre Nominal Rollನಲ್ಲಿ ಹಾಜರಾತಿಗುರುತಿಸುವ ಬಗ್ಗೆ:–</u>**

ಪ್ರವೇಶ ಪತ್ರದಲ್ಲಿ ವಿದ್ಯಾರ್ಥಿಯ ಸಹಿಯನ್ನು ಸಂಬಂಧಿಸಿದ ವಿದ್ಯಾರ್ಥಿಯ ಭಾವಚಿತ್ರದೊಂದಿಗೆಗಮನಿಸಿ, ತಾಳೆ ನೋಡಿ ಸದರಿ ಪ್ರವೇಶ ಪತ್ರದ ಬಲಭಾಗದನಿಗಧಿತಜಾಗದಲ್ಲಿ ವಿದ್ಯಾರ್ಥಿಯು ಪರೀಕ್ಷೆಗೆ ಹಾಜರಾದ ವಿಷಯ ಹಾಗೂ ಅವರಸಹಿಯನ್ನು ದಿನಾಂಕದೊಂದಿಗೆಪಡೆಯುವುದು.ಪರೀಕ್ಷಾ ಕೇಂದ್ರಗಳಲ್ಲಿರುವ ವಿದ್ಯಾರ್ಥಿಗಳ Photoalbumನ್ನು ಸಹ ಪರಿಶೀಲಿಸುವುದು.ಪರೀಕ್ಷೆಗೆ ಹಾಜರಾದಎಲ್ಲಾವಿದ್ಯಾರ್ಥಿಗಳ

ಸಹಿಯನ್ನುತಪ್ಪದೇ ಫೋಟೋ ಸಿ.ಎಸ್.ಆರ್.ನಲ್ಲಿ ಮಾಡಿಸಿಕೊಳ್ಳುವುದು. ಪರೀಕ್ಷಾಅವಧಿ ಮುಗಿಯುವವರೆಗೆ ಅಭ್ಯರ್ಥಿಗಳು ಪರೀಕ್ಷಾಕೊಠಡಿಯಿಂದ ಹೊರಗೆ ಹೋಗಲು ಅವಕಾಶ ನೀಡಬಾರದು.

16. ಗೈರು ಹಾಜರಿ ನಮೂನೆಯಲ್ಲಿ ವಿಷಯ ಮತ್ತುದರ್ಜೆವಾರುಗೈರು ಹಾಜರಾದ ವಿದ್ಯಾರ್ಥಿಗಳ ಮಾಹಿತಿಯನ್ನು ಮುಖ್ಯಅಧೀಕ್ಷಕರು ದೃಢೀಕರಿಸಿ ಪರೀಕ್ಷೆ ಮುಗಿದ ದಿನವೇ ಮಂಡಳಿಗೆ ಕಳುಹಿಸುವುದು.

**ಪರೀಕ್ಷಾ ನಂತರದ ಚಟುವಟಿಕೆಗಳು:**

17. ಪ್ರಾಯೋಗಿಕ ಮಂಡಳಿಯ ಪ್ರತಿ ಸದಸ್ಯರು ಬರೆಯುವ ವೈಯಕ್ತಿಕಅಂಕತ:ಖ್ತೆ ಪ್ರಾಯೋಗಿಕ ಮಂಡಳಿಯ ಅಧ್ಯಕ್ಷರು ತಯಾರಿಸಿದ ಕ್ರೋಢೀಕೃತಅಂಕತ:ಖ್ತೆ ಹಾಗೂ 8 ವಿದ್ಯಾರ್ಥಿಗಳಿಗೆ ಒಂದರಂತೆಕಂಪ್ಯೂಟರ್ಅಂಕಪಟ್ಟಿಯಲ್ಲಿ (AML) ಅಭ್ಯರ್ಥಿಗಳು ಪಡೆದ ಅಂಕಗಳನ್ನು ಅಧ್ಯಕ್ಷರಿಂದಲೇಕಪ್ಪು/ನೀಲಿ ಬಣ್ಣದ ಬಾಲ್ ಪಾಯಿಂಟ್ ಪೆನ್‌ನಲ್ಲಿ ತುಂಬಿಸಿ ಶೇಡ್ ಮಾಡಿಸಿ ಪ್ರಾಯೋಗಿಕ ಪರೀಕ್ಷಕರ, ಮಂಡಳಿ ಅಧ್ಯಕ್ಷರ ಸಹಿ ಪಡೆಯುವುದು. ಯಾವುದೇಕಾರಣಕ್ಕೂ ಕೆಂಪು ಬಣ್ಣದಇಂಕ್ ಪೆನ್‌ನ್ನು ಬಳಸಬಾರದು. ಯಾವುದೇಕಾರಣಕ್ಕೂ ಸೀಲ್ ಮಾಡಿದ ಲಕೋಟೆಯನ್ನು ಪರೀಕ್ಷಕರ ಬಳಿ ಇಟ್ಟುಕೊಳ್ಳಲು ಅವಕಾಶವಿಲ್ಲ.ಆಯಾ ದಿನದಂದೇ ಸಂಜೆ ಪರೀಕ್ಷಕರಿಂದ ಲಕೋಟೆಯನ್ನು ಪಡೆದು ಸೀಲುಮಾಡಿದ ಲಕೋಟೆ ಮೇಲೆ ನೋಡಲ್ ಅಧಿಕಾರಿಗಳು ಹಾಗೂ ಹಾಜರಿರುವ ಜಾಗೃತದಳದ ಅಧಿಕಾರಿಗಳ ಸಹಿಪಡೆದು ಸುರಕ್ಷತೆಯಲ್ಲಿಡತಕ್ಕದ್ದು. ಪ್ರಾಯೋಗಿಕ ಪರೀಕ್ಷೆಯಎಲ್ಲಾ ದಿನಗಳ ಲಕೋಟೆಗಳನ್ನು ಒಂದುದೊಡ್ಡ ಲಕೋಟೆಯಲ್ಲಿ ಹಾಕಿ ಸೀಲ್ ಮಾಡಿ ಮುಂದೆ ತಿಳಿಸಿರುವ ಕಛೇರಿ ವಿಳಾಸಕ್ಕೆ ಪರೀಕ್ಷೆ ಮುಗಿದ ಮಾರನೇ ದಿನವೇ ವಿಮೆ ಮಾಡಿದಅಂಚೆಯಲ್ಲಿ ಕಳುಹಿಸುವುದು. **AML ಶೀಟುಗಳನ್ನು ಯಾವುದೇಕಾರಣಕ್ಕೂ ಅಂಕ ತ:ಖ್ತೆಯೊಂದಿಗೆಜೋಡಿಸುವುದು, ಪಿನ್ ಮಾಡುವುದು ಮಾಡಬಾರದು.** ಉದಾ: MU01, MU02, MU03, MU21, MU22, MU23 MU24 MU41, MU43 MU45. MU12, MU14, MU16, KA71, KU61ವಿಷಯವಾರುಚಿಕ್ಕಚಿಕ್ಕ ಬಂಡಲ್ ಗಳನ್ನು ಮಾಡಿಆನಂತರಎಲ್ಲಾಚಿಕ್ಕ ಬಂಡಲ್‌ಗಳನ್ನು ಸೇರಿಸಿ ಒಂದುದೊಡ್ಡ ಬಂಡಲ್ ಮಾಡಿ ಮಂಡಳಿಗೆ ಕಳುಹಿಸುವುದು.

**18.** ಥಿಯರಿ ಪರೀಕ್ಷೆ ಮುಗಿದತಕ್ಷಣಉತ್ತರ ಪತ್ರಿಕೆಗಳನ್ನು ಆಯಾ ನೋಂದಣಿ ಸಂಖ್ಯೆಯುಳ್ಳ ಎ.ಎಂ.ಎಲ್‌ಗಳೊಟ್ಟಿಗೆ ಆಯಾ ಲಕೋಟೆಯಲ್ಲಿ ಹಾಕುವುದು. ಇದೇರೀತಿಜೂನಿಯರ್, ಸೀನಿಯರ್, ವಿದ್ವತ್ ಪೂರ್ವ, ವಿದ್ವತ್ಅಂತಿಮ ವಿಭಾಗಗಳ ಎಲ್ಲಾ ವಿಷಯಗಳ ಉತ್ತರ ಪತ್ರಿಕೆಗಳನ್ನು ಎ.ಎಂ.ಎಲ್ ಗಳೊಂದಿಗೆ ಪ್ರತ್ಯೇಕ ಲಕೋಟೆಯಲ್ಲಿ ಹಾಕುವುದು.

**19.** ಈ ಉತ್ತರ ಪತ್ರಿಕೆಗಳನ್ನೊಳಗೊಂಡ ಲಕೋಟೆಗಳನ್ನು ಬಟ್ಟೆಯಿಂದ ಮಾಡಿದಒಂದೇಚೀಲದಲ್ಲಿಟ್ಟು ಮೊಹರು ಮಾಡಿರಿಜಿಸ್ಟರ್ಡ್ಇನ್ಷೂರ್ಡ್ ಪಾರ್ಸಲ್ ಮುಖಾಂತರ( ಸ್ಥಳೀಯವಾಗಿದ್ದಲ್ಲಿ ಮುದ್ದಾಂ ಮೂಲಕ) ಮಂಡಳಿಗೆ ರವಾನಿಸಬೇಕು. ಕರ್ನಾಟಕ ಸಂಗೀತ, ಹಿಂದೂಸ್ಥಾನಿ ಸಂಗೀತ, ನೃತ್ಯ ಪರೀಕ್ಷೆಗಳ ಬಂಡಲ್‌ಗಳನ್ನು ಪ್ರತ್ಯೇಕವಾಗಿ ಮಾಡಬೇಕು. ಪ್ರತಿ ಬಂಡಲಿನ ಮೇಲ್ಭಾಗದ ಬಟ್ಟೆಯ ಮೇಲೆ ಎಡಪಾರ್ಶ್ವದಲ್ಲಿ ಸ್ಪಷ್ಟವಾಗಿಕಾಣುವಂತೆ ಕೆಳಕಂಡ ವಿವರಗಳನ್ನು ಬರೆಯುವುದು.

**ಅ. ಪರೀಕ್ಷಾಕೇಂದ್ರ ಸಂಖ್ಯೆ.**

**ಆ. ಕೇಂದ್ರದ ಹೆಸರು.**

**ಇ. ಲಕೋಟೆಗಳ ಸಂಖ್ಯೆ**

**ಈ ವಿಷಯ ಮತ್ತು ವಿಷಯ ಸಂಕೇತ**

ಉತ್ತರ ಪತ್ರಿಕೆಗಳನ್ನು ಈ ಕೆಳಕಂಡ ವಿಳಾಸಕ್ಕೆ ತಡಮಾಡದೇ ಪರೀಕ್ಷೆ ಮುಗಿದ ದಿನವೇ Registered Insured Parcel ಮೂಲಕ ಕಳುಹಿಸುವುದು.

**ಶ್ರೀಮತಿ ಹೇಮಲತಾ.ಡಿ.ನಾಯಕ, ಸಹಾಯಕ ನಿರ್ದೇಶಕರು (ಸಂಗೀತ ಪರೀಕ್ಷೆಗಳು)**
**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 4ನೇ ಮಹಡಿ,**
**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-3**

**20. <u>ಸಾದಿಲ್ವಾರುಖರ್ಚು (ಕಂಟೆನ್‌ಜನ್ಸಿ):–</u>**
ಮುಖ್ಯ ಅಧೀಕ್ಷಕರುಗಳು ಅನಾವಶ್ಯಕವೆಂದುಕಂಡು ಬರುವ ಖರ್ಚುಗಳನ್ನು ಯಾವುದೇಕಾರಣದಿಂದಾಗಲೀ ಭರಿಸಲಾಗುವುದಿಲ್ಲ. ಮತ್ತು ಬಿಲ್ಲಿನಲ್ಲಿಅಂತಹ ಮೊಬಲಗನ್ನು ಕಡಿತಗೊಳಿಸಲಾಗುವುದು. ಸಾದಿಲ್ವಾರು ಖರ್ಚು ಬಾಬ್ತಿನ ಮುಖ್ಯ ಅಂಶಗಳೆಂದರೆ:–

1. ಉತ್ತರ ಪುಸ್ತಕಗಳನ್ನು ಕಳುಹಿಸಲು ಆಗುವ ಇನ್‌ಷೂರ್ಡ್ ಅಂಚೆ ವೆಚ್ಚ.

2. ಉತ್ತರ ಪತ್ರಿಕೆ ಬಂಡಲ್‌ಕಟ್ಟಲು ಪ್ರತಿಚೀಲಕ್ಕೆಅರ್ಧ ಮೀಟರಿನಂತೆಸರ್ಕಾರದಿಂದಗೊತ್ತುಪಡಿಸಿರುವ ಕಂಟ್ರೋಲ್ಡ್ ಕ್ಲಾತ್‌ಗಳನ್ನು ಮಾತ್ರಖರೀದಿಸುವುದು.

3. ಅವಶ್ಯಕವಾಗುವಷ್ಟು ವ್ಯಾಕ್ಸ್, ಮೇಣದ ಬತ್ತಿ, ಗೋಂದು (ಹೆಚ್ಚು ಬೆಲೆಯಸೀಸೆಯಲ್ಲಿನ ಗೋಂದಿನ ಖರ್ಚನ್ನುಕೊಡಲಾಗುವುದಿಲ್ಲ.)ಮೈದಾ ಹಿಟ್ಟಿನಿಂದಗೋಂದುತಯಾರುಮಾಡಿಉಪಯೋಗಿಸಬಹುದು.

**21. <u>ಲೇಖನ ಸಾಮಗ್ರಿಯ ಲೆಕ್ಕ:–</u>**
ಲೇಖನ ಸಾಮಗ್ರಿಯ ಲೆಕ್ಕದ (ಸ್ಟೇಷನರಿಅಕೌಂಟ್ಸ್) ನಮೂನೆಯನ್ನು ಹಾಗೂ ಉಳಿಕೆಯ ಎಲ್ಲಾ ಲೇಖನ ಸಾಮಗ್ರಿಗಳನ್ನು ಪರೀಕ್ಷೆ ಮುಗಿದ 3 (ಮೂರು) ದಿನಗಳೊಳಗಾಗಿ **ಶ್ರೀಮತಿ ಎನ್. ಶ್ರೀವಲ್ಲಿ, ಸಹಾಯಕ ನಿರ್ದೇಶಕರು, 'ವೈ' ಶಾಖೆ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 4ನೇ ಮಹಡಿ,6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–3**ಇವರ ಸ್ವಂತ ವಿಳಾಸಕ್ಕೆ ಕಳುಹಿಸುವುದು.

**22. <u>ಪರೀಕ್ಷೆಗೆಅನ್ವಯಿಸುವ ಸಿಬ್ಬಂದಿ ಹಾಗೂ ಸಂಭಾವನೆ ಬಿಲ್ಲಿನ ವಿವರ:–</u>**
ಥಿಯರಿ ಪರೀಕ್ಷೆಗೆ ಸಂಬಂಧಿಸಿದಂತೆ ಪ್ರತಿಕೊಠಡಿಗೆ24 ಮಕ್ಕಳನ್ನು ನಿಗಧಿಗೊಳಿಸಿ ಒಬ್ಬಮೇಲ್ವಿಚಾರಕರು (ಸೂಪರ್‌ವೈಸರ್), 10 ಕೊಠಡಿಗಳಿಗಿಂತ ಹೆಚ್ಚಿದ್ದಲ್ಲಿಒಂದುರಿಲೀವರ್ ನೇಮಕಗೊಳಿಸುವುದು. ಸಂಭಾವನೆ ಬಿಲ್ಲನ್ನು (ಕನ್ಸಾಲಿಡೇಟೆಡ್‌ರೆಮ್ಯೂನರೇಷನ್ ಬಿಲ್) ತಯಾರಿಸುವಾಗಒಬ್ಬ ಸಹಾಯಕರು ಹಾಗೂ ಒಬ್ಬ ನೀರು ಸರಬರಾಜು ಮಾಡುವ ವ್ಯಕ್ತಿಗೆ(ಡಿ ಗ್ರೂಪ್)ಸಂಭಾವನೆ ನೀಡಲು ಅವಕಾಶ ಕಲ್ಪಿಸಲಾಗಿದೆ.

**23. ಪರೀಕ್ಷಾಕಾರ್ಯಕ್ಕೆ ನೇಮಿಸಲ್ಪಟ್ಟವರಿಗೆ ಈ ಕೆಳಗಿನಂತೆ ಸಂಭಾವನೆಯನ್ನು ನೀಡಲಾಗುತ್ತದೆ.**

**ಒಂದುಅಧಿವೇಶನಕ್ಕೆ :**

| ಕ್ರ.ಸಂ. | ಪರೀಕ್ಷಾಕಾರ್ಯಕ್ಕೆ ನೇಮಿಸಲ್ಪಟ್ಟಅಧಿಕಾರಿ/ಸಿಬ್ಬಂದಿ | ಸಂಭಾವನೆ (ರೂ.ಗಳಲ್ಲಿ) |
|---|---|---|
| 1. | ಮುಖ್ಯಅಧೀಕ್ಷಕರಿಗೆ | 75–00 |
| 2. | ಸಹಾಯಕಅಧೀಕ್ಷಕರು<br>(ಕೇಂದ್ರದಲ್ಲಿ 500ಕ್ಕಿಂತ ಹೆಚ್ಚಿಗೆ ವಿದ್ಯಾರ್ಥಿಗಳಿದ್ದರೆ ಮಾತ್ರ) | 70–00 |
| 3. | ಕೊಠಡಿ ಮೇಲ್ವಿಚಾರಕರಿಗೆ | 65–00 |
| 4. | ಸಹಾಯಕರು | 55–00 |
| 5. | ಗ್ರೂಪ್ ಡಿ (ನೀರುಕೊಡುವ ವ್ಯಕ್ತಿ) | 50–00 |

ನಿಯಮಿತ ನಮೂನೆಯಲ್ಲಿ ದ್ವಿ ಪ್ರತಿಯಲ್ಲಿಸಂಭಾವನೆ ಬಿಲ್ಲನ್ನುತಯಾರಿಸಿ ಅವುಗಳನ್ನು ಡಿ.ಸಿ. ಬಿಲ್ಲು ಮತ್ತು ರಸೀತಿಗಳನ್ನು ರಿಜಿಸ್ಟರ್ಡ್ ಅಂಚೆ ಮೂಲಕ ಪರೀಕ್ಷೆ ಮುಗಿದ03 ದಿನಗಳೊಳಗೆ **<u>ಶ್ರೀ ನಾಗರಾಜು ಲೆಕ್ಕಾಧಿಕಾರಿಗಳು, ಲೆಕ್ಕ ಪತ್ರ ವಿಭಾಗ, 2ನೇ ಮಹಡಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು–560003</u>**ಇವರ ವಿಳಾಸಕ್ಕೆ ಕಳುಹಿಸುವುದು. ಬಿಲ್ಲುಗಳಿಗೆ ಸಂಬಂಧಿಸಿದ ಎಲ್ಲಾ ಸಮಸ್ಯೆಗಳಿಗೆ ಮಂಡಳಿಯ ಲೆಕ್ಕಪತ್ರಶಾಖೆಯನ್ನು ಸಂಪರ್ಕಿಸುವುದು.

24. ಅತಿಜರೂರು ಸಂದರ್ಭಗಳಲ್ಲಿ ಮಂಡಳಿಯ ಅಧಿಕಾರಿಗಳನ್ನು ಈ ಕೆಳಕಂಡ ದೂರವಾಣಿ ಸಂಖ್ಯೆಗಳಲ್ಲಿ ಸಂಪರ್ಕಿಸಬಹುದು.

| | | |
|---|---|---|
| 1. | ಶ್ರೀ ಬಿ ಹೆಚ್ ಬಸವರಾಜು<br>ನಿರ್ದೇಶಕರು (ಇತರೆ ಪರೀಕ್ಷೆಗಳು) | ಕಛೇರಿದೂರವಾಣಿ – 23360108 |
| 2. | ಶ್ರೀ ಹೆಚ್ ಮಂಜುನಾಥ್<br>ಕಾರ್ಯದರ್ಶಿಗಳು. | ಕಛೇರಿದೂರವಾಣಿ – 23445579 |
| 3. | ಶ್ರೀಮತಿ ಹೇಮಲತಾ ಡಿ ನಾಯಕ.<br>ಸಹಾಯಕ ನಿರ್ದೇಶಕರು, | ಕಛೇರಿದೂರವಾಣಿ – 23360109 |

ಸಹಿ/–

ನಿರ್ದೇಶಕರು

(ಇತರೆ ಪರೀಕ್ಷೆಗಳು)

**<u>ಇವರಿಗೆ:–</u>**

1. ರಾಜ್ಯದಎಲ್ಲಾಜಿಲ್ಲಾಡಯಟ್ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ.
2. ಸಂಗೀತ ಪರೀಕ್ಷಾ ನೋಡಲ್ ಅಧಿಕಾರಿಗಳವರಿಗೆ ಕಳುಹಿಸುತ್ತಾ ಈ ಬಗ್ಗೆ ಅಗತ್ಯಕ್ರಮ ಕೈಗೊಳ್ಳಲು ಸೂಚಿಸಿದೆ.
3. ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರುಗಳ ಅಗತ್ಯಕ್ರಮಕ್ಕಾಗಿ.
4. ಕಛೇರಿ ಪ್ರತಿ.

# ಹಾಡುಗಾರಿಕೆ ಮತ್ತು ವಾದ್ಯ ಸಂಗೀತಎರಡೂ ವಿಷಯ ತೆಗೆದುಕೊಳ್ಳುವ ಅಭ್ಯರ್ಥಿಗಳ ವಿವರ

**ಕೇಂದ್ರ ಸಂಕೇತ ಮತ್ತು ವಿಳಾಸ :**

| ಕ್ರ ಸಂ | ಅಭ್ಯರ್ಥಿಯ ಹೆಸರು | ವಿಷಯ ಸಂಕೇತ | ನೋಂದಣಿ ಸಂಖ್ಯೆ ಹಾಡುಗಾರಿಕೆ | ನೋಂದಣಿ ಸಂಖ್ಯೆ ವಾದ್ಯ ಸಂಗೀತ |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

**ಮುಖ್ಯಅಧೀಕ್ಷಕರ ಸಹಿ ಹಾಗೂ ಮೊಹರು**

ಸಂಗೀತ/ನೃತ್ಯ/ತಾಳವಾದ್ಯ ಪರೀಕ್ಷೆಗಳಲ್ಲಿ ವಿದ್ವತ್ಅಂತಿಮ ಪ್ರಾಯೋಗಿಕ ಪತ್ರಿಕೆ ಭಾಗ-1 ಮಂಚ ಪ್ರದರ್ಶನ ಬಗ್ಗೆ ಡಿ.ಎಸ್.ಇ.ಆರ್.ಟಿ.ಯ ಪಠ್ಯ ವಸ್ತುವಿನಲ್ಲಿ ನೀಡಲಾಗಿರುವ ಮಾಹಿತಿ.

## ಕರ್ನಾಟಕ ಶಾಸ್ತ್ರೀಯ ಸಂಗೀತ
**ಪತ್ರಿಕೆ-2 (ಭಾಗ-1)**

**ಸಂಗೀತಕಛೇರಿ: ಸಭಿಕರ ಸಮ್ಮುಖದಲ್ಲಿ**

**ಗಾಯಕರು:** ಪಿಟೀಲು ಮತ್ತು ಮೃದಂಗ ಪಕ್ಕವಾದ್ಯಗಳೊಂದಿಗೆ, ವಾದಕರು ಮೃದಂಗ ಪಕ್ಕವಾದ್ಯದೊಂದಿಗೆಒಂದುಘಂಟೆಯ ಕಾಲ-5ರಿಂದ 10ನಿಮಿಷಗಳ ಕಾಲವನ್ನು ಮೃದಂಗತನಿವಾದನದ ನಿರ್ವಹಣೆಗಾಗಿ ಮೀಸಲು ಇಡಬೇಕು. ಆದಿತಾಳದ ವರ್ಣ-ಎರಡು ಕಾಲಗಳಲ್ಲಿ.ಚತುರಶ್ರರೂಪಕ ಮತ್ತು ಮಿಶ್ರಛಾಪು ತಾಳಗಳಲ್ಲಿ ಎರಡು ಮಧ್ಯಮಕಾಲದ ಕೃತಿಗಳು.ಎರಡುರಾಗಾಲಾಪನೆ, ನೆರವಲ್, ಸ್ವರ ಪ್ರಸ್ತಾರದೊಂದಿಗೆ.1 ವಿಳಂಬಕಾಲದ ಕೃತಿ.ಈ ಕೃತಿಗೆ ಮೃದಂಗತನಿವಾದನದ ನಿರ್ವಹಣೆ. ಹರಿದಾಸರ ಪದ-1, ತಿಲ್ಲಾನ-1.

## ಕರ್ನಾಟಕ ಶಾಸ್ತ್ರೀಯ ತಾಳವಾದ್ಯ

ವಿದ್ವತ್ಅಂತಿಮ ಪರೀಕ್ಷೆಗೆ ನಿಗಧಿತವಾಗಿರುವ ಸಂಗೀತ ಪ್ರಯೋಗ ಪತ್ರಿಕೆ-2, ಭಾಗ-1 ರಂತೆಕಛೇರಿಯನ್ನು ನಿರ್ವಹಿಸುವುದು ಮತ್ತು 10 ನಿಮಿಷಗಳ ಕಾಲ ವಿಸ್ತಾರವಾದ 'ತನಿ' ವಾದನವು ನಡಬೇಧಗಳಿಂದ ಕೂಡಿರಬೇಕು.

## ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ
**ಪ್ರಯೋಗ ವಿಭಾಗ: ಪತ್ರಿಕೆ-1**

1. **ಮಂಚಪ್ರದರ್ಶನಕ್ಕಾಗಿ:-** ಶಾಸ್ತ್ರೀಯ ವಿಭಾಗದಲ್ಲಿ ಸೂಚಿಸಿದ ಯಾವುದೇರಾಗದಲ್ಲಿಂದ ಬಡಾಖ್ಯಾಲವನ್ನು ವಿಸ್ತಾರವಾಗಿ 15-45 ನಿಮಿಷಗಳವರೆಗೆ ಛೋಟಾಖ್ಯಾಲ ಸಹಿತ ಹಾಡುವಕ್ಷಮತೆ ಮತ್ತುಠುಮ್ರಿ 15 ನಿಮಿಷ.
2. ಕೆಳಕಂಡ ರಾಗಗಳಿಂದ ಒಂದುಧ್ರುಪದಗಾಯನವನ್ನುಠಾಯ್, ದುಗುನ್, ತಿಗುನ್, ಚೌಗುನ್‌ಗಳಲ್ಲಿ ಹಾಡುವಕ್ಷಮತೆ. ಯಮನ್, ಕೇದಾರ, ಬಾಗೇಶ್ರೀ, ಹಿಂಡೋಲ್, ಬಿಭಾಸ್, ಮಿಯಾಮಲ್ಹಾರ್.
3. ಕೆಳಗಿನ ರಾಗದಲ್ಲಿಂದಒಂದನ್ನುಧಮಾರಕ್ಕಾಗಿ ಉಪಯೋಗಿಸಿ ಠಾಯ್, ದುಗುನ್, ತಿಗುನ್, ಚೌಗುನ್‌ಗಳಲ್ಲಿ ಹಾಡಿತೋರಿಸಬೇಕು: ದೇಸ್, ಜಯಜಯವಂತಿ.
4. ಪಠ್ಯಕ್ರಮದರಾಗದಿಂದಯಾವುದೇಒಂದುತರಾನಾಅಭ್ಯಾಸ ಮಾಡಿರಬೇಕು. ವಾದನದ ವಿದ್ಯಾರ್ಥಿಗಳು ಬಡಾಖ್ಯಾಲಕ್ಕೆ ಬದಲಾಗಿ ವಿಲಂಬಿತಗತ್ತು, ಛೋಟಾಖ್ಯಾಲಕ್ಕೆ ಬದಲಾಗಿಧೃತಗತ್ತು, ಧ್ರುಪದ, ಧಮಾರಕ್ಕೆ ಬದಲಾಗಿತೀನತಾಲವಲ್ಲದಅನ್ಯ ತಾಳಗಳನ್ನು ಉಪಯೋಗಿಸಬೇಕು.

## ಹಿಂದೂಸ್ತಾನಿ ಶಾಸ್ತ್ರೀಯ ತಾಳವಾದ್ಯ
**ಪತ್ರಿಕೆ-2 (ಭಾಗ-1)**

1. ಆಮಂತ್ರಿತಕಲಾವಿದರಎದುರಿಗೆ 'ರಂಗಮಂಚ ಪ್ರದರ್ಶನ' ಕಾರ್ಯಕ್ರಮ ನೀಡುವುದು. ಕಾರ್ಯಕ್ರಮದಲ್ಲಿ ಯೋಜಿಸಿಕೊಳ್ಳಬೇಕಾದ ಚೀಜ್‌ಗಳು.
2. ಯಾವುದಾದರೊಂದು ತಾಳದಲ್ಲಿ ಸೋಲೊ ವಾದನ-ಚಕ್ರಧಾರ, ಪೇಶಕಾರ್, ತಿಹಾಯ್ ಮುಂತಾದವುಗಳ ಸಹಿತ 40 ನಿಮಿಷ.
3. ಸೋಲೊ ನುಡಿಸಿದ ತಾಳವಲ್ಲದೆ ಬೇರೆ ತಾಳದಲ್ಲಿ ಗಾಯನಅಥವಾ ವಾದನಕ್ಕೆ ಸಾಥ್ ಸಂಗತ್ ಮಾಡುವುದು-20 ನಿಮಿಷ.

**ಭರತನಾಟ್ಯ**

**ಪತ್ರಿಕೆ–2 (ಭಾಗ–1)**

**ನೃತ್ಯ ಪ್ರದರ್ಶನ**

1. ಒಂದುಜತಿಸ್ವರ (ಹಿಂದೆಕಲಿತಿರುವುದಲ್ಲದೆ ಬೇರೆರಾಗದಲ್ಲಿ)
2. ಒಂದು ಶಬ್ಧ (ಹಿಂದೆಕಲಿತಿರುವುದಲ್ಲದೆ)
3. ಒಂದು ಪದವರ್ಣ (ಹಿಂದೆಕಲಿತಿರುವುದಲ್ಲದೆ ಬೇರೆರಾಗದಲ್ಲಿ)
4. ನಾಯಿಕಾಭಾವವುಳ್ಳ ಒಂದು ಪದ.
5. ಅಷ್ಟಪದಿ– (ಒಂದು ಸರ್ಗ–ಹಿಂದೆಕಲಿತಿರುವುದಲ್ಲದೆ)
6. ಎರಡು ಶ್ಲೋಕಗಳಿಗೆ ಅಭಿನಯ (ಹಿಂದೆಕಲಿತಿರುವುದಲ್ಲದೆ)
7. ಒಂದುತಿಲ್ಲಾನ (ಹಿಂದೆಕಲಿತಿರುವುದಲ್ಲದೆ–ಬೇರೆರಾಗದಲ್ಲಿ)

**ಕೂಚಿಪುಡಿ**

**ಪತ್ರಿಕೆ–2 (ಭಾಗ–1)**

**ಕೆಳಗೆ ಸೂಚಿಸಿರುವ ನೃತ್ಯ ಬಂಧಗಳ ಪ್ರದರ್ಶನ.**

1. ಪದಂ–ಯಾವುದಾದರೂ ನಾಲ್ಕು
2. ಯಾವುದಾದರೂಒಂದುದೇವಿಸ್ತುತಿ.
3. ನಟರಾಜ ಸ್ತುತಿ – ಯಾವುದಾದರೂಒಂದು.
4. ಜಾವಳಿ – ಯಾವುದಾದರೂಎರಡು.
5. 'ಶ್ರೀ ಕೃಷ್ಣಾ ಕರ್ಣಾಮೃತ' ದಿಂದ ಆರಿಸಿದ ಯಾವುದಾದರೂಎರಡು ಶ್ಲೋಕಗಳಿಗೆ ಅಭಿನಯ.
6. ತರಂಗ–'ನಂದನಂದನಾ' ಅಥವಾ 'ಗೋವರ್ಧನಗಿರಿಧಾರ'

**ಕಥಕ್**

**ಪತ್ರಿಕೆ–2 (ಭಾಗ–1)**

**ನೃತ್ಯ ಪ್ರದರ್ಶನ**

1. ಒಂದು ಪ್ರಬಂಧ
2. ಒಂದುತಿರ್ವಟಅಥವಾಗತಭಾವ–ಮಹಾಭಾರತದಲ್ಲಿನ 'ದ್ರೌಪದಿ ಚೀರಹರನ' ಅಥವಾ 'ಕೃಷ್ಣಲೀಲಾ' ದಿಂದ ಹೋರಿಅಥವಾಕಾಲಿಯ ಮರ್ದನ.
3. ರೂಪಕ ತಾಳದಲ್ಲಿ ಒಂದುರಚನೆ.
4. ನಾಯಿಕಾ ಭಾವವುಳ್ಳ ಒಂದು ಪದ.
5. ಅಷ್ಟಪದಿ–(ಒಂದು ಸರ್ಗ–ಹಿಂದೆಕಲಿತಿರುವುದಲ್ಲದೆ)
6. ಎರಡು ಶ್ಲೋಕಗಳಿಗೆ ಅಭಿನಯ (ಹಿಂದೆಕಲಿತಿರುವುದಲ್ಲದೆ)
7. ಒಂದುತರಾನಾ (ಹಿಂದೆಕಲಿತಿರುವುದಲ್ಲದೆ–ಬೇರೆರಾಗದಲ್ಲಿ)